

# ದಿಂಬಿನಡಿಯಲ್ಲೊಂದು ರಿವಾಲ್ವರ್

■ ಯಂಡಮೂರಿ ವೀರೇಂದ್ರನಾಥ್
ಕನ್ನಡಕ್ಕೆ: ಸಂಡೂರು ವೆಂಕಟೇಶ್
ಕಲೆ: ಮನೋಹರ್ ಆಚಾರ್ಯ

## ನಾಟಕ ಆಡಿದ ಕಲ್ಯಾಣಿ

‘ನಡೆದಿದ್ದನ್ನೆಲ್ಲ ಹೇಳಿದರೆ ತಡೆದುಕೊಳ್ಳುವ ಶಕ್ತಿ ಇದೆಯಾ? ಹಾಗಿದ್ದರೆ ಕೇಳು...’ ಎಂದು ಕಲ್ಯಾಣಿ ಇಮ್ತಿಯಾಜ್‌ನಿಗೆ ನಡೆದಿದ್ದನ್ನೆಲ್ಲ ಹೇಳುತ್ತಿದ್ದಾಗ, ಅತ್ತ ಕೃಷ್ಣ ತನ್ನ ಚೀಫ್‌ಗೆ ಕೇಸ್ ರಿಪೋರ್ಟ್ ಮಾಡುತ್ತಿದ್ದನು.

‘ಮಿಜ್ರಾಡಿನ್ ಮಗ ಪ್ರೇಮ್‌ಜೀತ್ ಎನ್ನುವ ವಿಷಯ ನಮಗೆ ಕಾಶ್ಮೀರದಲ್ಲಿ ತಿಳಿಯಿತು ಸರ್, ಮಿಕ್ಕ ವಿವರಗಳನ್ನು ಅಲ್ಲಿಯೇ ಶೇಖರಿಸಿದೆವು...’ ಎಂದು ಮುಂದುವರೆಸಿದನು.

‘ಮಿಜ್ರಾಡಿನ್‌ಗಿರುವುದು ಎರಡೇ ಬಲಹೀನತೆಗಳು. ಒಂದು ತನ್ನ ಧರ್ಮ, ಎರಡನೆಯದು ಮಗ. ಮಗನ ಮೇಲೆ ಹುಚ್ಚು ಪ್ರೀತಿ. ಅವನ ಭದ್ರತೆಗಾಗಿ ಎಚ್ಚರಿಕೆ ವಹಿಸುತ್ತಾನೆ. ಮಗನನ್ನು ‘ಇಮ್ತಿಯಾಜ್ ಬಿನ್ ಲಾಡೆನ್’ ಅಂತ ಹೆಸರಿಟ್ಟು, ಲಾಡೆನ್‌ನ ಹಾಗೆ ಇಂಜಿನಿಯರ್ ಮಾಡಬೇಕೆಂದು, ಕಾಶ್ಮೀರದಿಂದ ಇಲ್ಲಿಗೆ ಕರೆ ತಂದು ಸದಾನಂದ ಎಂದು ಹೆಸರು ಬದಲಾಯಿಸಿ ಓದಿಸುತ್ತಿದ್ದಾನೆ. ಮುಂದೆ ಅವನು ವಿಧ್ವಂಸಕ ಕೃತ್ಯಗಳನ್ನು ಮಾಡಿದರೆ ಮತ ಪರವಾದ ಗಲಾಟೆಗಳು ಆಗಬಾರದೆಂದು ಈ ಮುನ್ನೆಚ್ಚರಿಕೆ. ಆದರೆ ಮಗ ಟೆರರಿಸ್ಟ್ ಆಗಲಿಲ್ಲ. ಡ್ರಗ್ ಅಡಿಕ್ಟ್ ಆದ. ಒಬ್ಬ ಬ್ಯಾಂಕ್ ಆಫೀಸರ್ ಹೆಂಡತಿಯ ಜೊತೆ ಸೇರಿ ಮಾದಕ ಪದಾರ್ಥಗಳ ಅಭ್ಯಾಸ ಬೆಳೆಸಿಕೊಂಡ.’

ಕುಕ್ಕುಟೇಶ್ವರಸ್ವಾಮಿ, ಉಳಿದ ಆಫೀಸರ್‌ಗಳು ಆಸಕ್ತಿಯಿಂದ ಕೇಳುತ್ತಿದ್ದರು.

‘ಗಫಾರ್‌ಖಾನ್‌ನನ್ನು ಕಿಡ್ನ್ಯಾಪ್ ಮಾಡಲು ಬಂದ ಮಿಜ್ರಾಡಿನ್‌ಗೆ ಇದೇ ಊರಿನಲ್ಲಿರುವ ಮಗನ ವಿಷಯ ತಿಳಿಯಿತು. ಆಫೀಸರ್‌ನ ಹೆಂಡತಿಯನ್ನು ಕೊಲೆ ಮಾಡಿ ಮಗನನ್ನು ಕರೆದೊಯ್ದನು. ಎಲ್ಲ ವಿಷಯಗಳಲ್ಲಿ ವಿಪರೀತ ಎಚ್ಚರವಹಿಸುವ ಮಿಜ್ರಾಡಿನ್ ಮಗನಿಗಾಗಿ ಅವಸರಪಟ್ಟನು. ಬಹುಶಃ ಅದೇ ಅವನು ಮಾಡಿದ ತಪ್ಪು. ಅದರೊಂದಿಗೆ ಎಲ್ಲ ಘಟನೆಗಳ ಮಧ್ಯದ ಲಿಂಕ್‌ಗಳೆಲ್ಲ ನಮಗೆ ಪೂರ್ತಿಯಾಗಿ ಅರ್ಥವಾಯಿತು.

ಚೀಫ್ ತಲೆಯಾಡಿಸಿದರು.

‘ಮಿಜ್ರಾಡಿನ್‌ನ ಹಿಡಿಯಬೇಕೆಂದರೆ ಅವನ ಮಗನನ್ನು ಬಿಟ್ಟರೆ ನಮಗೆ ಬೇರೆ ಮಾರ್ಗವಿಲ್ಲ. ಅವನ ವಿಷಯಗಳನ್ನೆಲ್ಲ ಕಲೆ ಹಾಕಿದೆವು. ಪ್ರೇಮ್‌ನ ಹತ್ತಿರ ಫೋನ್‌ಗೆ ಕೂಡ ದುಡ್ಡಿರುತ್ತಿರಲಿಲ್ಲ. ಆದ್ದರಿಂದ ವಿಲಾಸಗಳಿಗೆ ದುಡ್ಡು ಬೇಕಾದಾಗಲೆಲ್ಲ ಬ್ಯಾಂಕ್ ಆಫೀಸರ್ ಮನೆಯಿಂದ ತಾಯಿಗೆ ಫೋನ್ ಮಾಡುತ್ತಿದ್ದನು. ಕೊಡದಿದ್ದರೆ ಹೊಡೆಯುತ್ತಿದ್ದ ಎಂದಾಕೆ ಹೇಳಿದಳು. ಅವನನ್ನು ಅರೆಸ್ಟ್ ಮಾಡಬಹುದು. ಆದರೆ ಅವನೊಬ್ಬ ಮಾಸೋಕಿಸ್ಟ್. ಸಿಗರೇಟ್‌ನಿಂದ ತನ್ನನ್ನು ತಾನು ಸುಟ್ಟುಕೊಳ್ಳುತ್ತಾ ಆ ನೋವನ್ನು ಎಂಜಾಯ್ ಮಾಡುತ್ತಾನೆ. ಆದ್ದರಿಂದ ಅವನನ್ನು ಲಾಕಪ್‌ನಲ್ಲಿಟ್ಟು ಟಾರ್ಚರ್ ಕೊಟ್ಟು ಸತ್ಯವನ್ನು ಬಾಯಿ ಬಿಡಿಸಲು ಸಾಧ್ಯವಿಲ್ಲ. ಅವನ ಬಲಹೀನತೆ ಹೆಣ್ಣು. ಅದರಲ್ಲೂ ಮದುವೆಯಾದ ಹೆಂಗಸರೆಂದರೆ ಹುಚ್ಚು. ಶಾಸ್ತ್ರೋಕ್ತವಾಗಿ ಪೂಜೆ ಮಾಡುವ ಹೆಂಗಸರೆಂದರೆ ಮಹಾ ಹುಚ್ಚು. ಅದಕ್ಕೇ, ನಾನೂ— ಕಲ್ಯಾಣಿ ಗಂಡ ಹೆಂಡತಿಯ ಹಾಗೆ ನಾಟಕವಾಡಬೇಕೆಂದು ನಿರ್ಧಾರ ಮಾಡಿದೆವು. ನಿಮ್ಮ